ನೋಟಿಫಿಕೇಷ್ಯ.

ತಾರೀಖು 19ನೇ ಏಪ್ರೆಲ್ 1895.

ಇದರಿಂದ ಸಕಲಜನಗಳೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಚಾಲ್ತಿ ಸಾಲಿನಲ್ಲಿ ಫಾರೆಸ್ಟು ಇಲಾಖಾ ಮೂರಿಫತು ಜವಾಯಿಸಲ್ಪಟ್ಟ ಹಿರೀಕಲ್‌ಗುಡ್ಡ ವಗೈರೆ ಸ್ಟೇಟ್ ಫಾರೆಸ್ಟುಗಳ ಅಳಲೇಕಾಯಿಗಳನ್ನು ಈ ಕೆಳಗೆ ಕಾಣುವ ಸ್ಥಳ ಮತ್ತು ತಾರೀಖುಗಳಲ್ಲಿ ಹರಾಜು ಮಾಡಲ್ಪಡುತ್ತವೆ.

ಹರಾಜು ಆಗುವಸ್ಥಳ.	ತಾರೀಖು.	ಮೊತ್ತ.
ಹಾಸನ ..	10ನೇ ಮೇ 1895	500 ಮಣ } ಖಾಸಗೆ
ಅರ್ಕಿಕೆರೆ ..	15ನೇ ಮೇ 1895	1500 ಮಣ } ಜಿ

ಷರತ್ತುಗಳು.

ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 1887ನೇ ಇಸವಿ ಜೂನ್ 11ನೇ ಮಕ್ಕಂ ನೋಟಿಫಿಕೇಷ್ಯ ಹರಾಜು ಕಾಲದಲ್ಲಿ ಪೋದಲ್ಪಡುವದು.

ಮುದ್ದಪ್ಪ,
ಅಸಿಸ್ಟೆಂಟ್ ಕಂಸರ್‌ವೇಟರ್ ಆಫ್ ಫಾರೆಸ್ಟ್ಸ್.

ಕಡೂರು ಡಿಸ್ಟ್ರಿಕ್ಟು.
ಚಿಕ್ಕಮಗಳೂರು ತಾಲ್ಲೂಕು.
ಇಸ್ತಿಹಾರ್‌ನಾಮಾ.
ತಾರೀಖು 11ನೇ ಏಪ್ರೆಲ್ ಸ್ಯ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಪಂಡ್ರವಳ್ಳಿ ಗ್ರಾಮದಲ್ಲಿ ಇರುವ ಇದರಡಿ ನಮೂದುಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1895ನೇ ಇಸವಿ ಜೂನ್ ತಾರೀಖು 5ನೇ ಬುಧವಾರ ಹಗಲು 11 ಘಂಟೆಗೆ ಡಿಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಡಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್‌ದಾರ್ರ ರೂಬರೂ ಚಿಕ್ಕಮಗಳೂರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಸ್ಸೆಸ್ಟೆಡ್ ಪೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಸ್ಸೆಸ್ಟೆಡ್ ಪೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷರೂ ಠೇವಣಿ ಮೊಬಲಗನ್ನ ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್ಟೆಡ್ ಪೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರದಲ್ಲಿ ನಮೂದಾಗುವ ಸಂದರ್ಭಾನುಸಾರ ಷರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನ ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯಿತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವೆಜಾ ಜಾತಾ ಬಾಕಿನಿಂತ ಠೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಕೇರತಕ್ಕದ್ದು. ಮತ್ತು ಸೊತ್ತು ಪುನಹ ವಿಕ್ರಯಿಸಲ್ಪಡುವದು, ಖರೀದಿ ಮೊಬಲಗನ್ನು ಪಾವತಿ ಮಾಡಲು ತಪ್ಪಿದ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡ ದ್ದಲ್ಲದೆ ಅನಂತರ ಡಿಟೋ ಸೊತ್ತನ್ನು ಹರಾಜು ಮಾಡುವದರಲ್ಲಿ ವುತ್ಪತ್ತಿಯಾನ್ನು ಮೊಬಲಗಿನ ಯಾವ ಭಾಗದ ಹಕ್ಕೂ ಇಲ್ಲದವನಾಗಿರುತ್ತಾನೆ ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡಿಪ್ಯೂಟಿ ಕಮ್ಮಿಷನರ್ ಸಾಹೇಬರವರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರ್ ಬಗ್ಯೆ ತಿಳಿಸಿ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ವುತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪುಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಅಂಥಾ ವೆತ್ಯಾಸದ ಮೊಬಲಗನ್ನು ಡಿಪ್ಯೂಟಿ ಕಮ್ಮಿಷನರವರು ಜಮೀನು ಕಂದಾಯದ ಬಾಕಿಯಂತೆ ವಸೂಲ ಮಾಡತಕ್ಕದ್ದು.